# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ರಾಜೇಂದ್ರ ರಾಜಣ್ಣ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 63(556) |
| ಉತ್ತರಿಸಬೇಕಾದ ದಿನಾಂಕ | 20.02.2024 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಧುಗಿರಿ ಪಟ್ಟಣದ ಯು.ಜಿ.ಡಿ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; ಈ ಕಾಮಗಾರಿಗೆ ಬಿಡುಗಡೆಯಾಗಿರುವ ಅನುದಾನದ ಮೊತ್ತ ಎಷ್ಟು; ಬಳಕೆಯಾಗಿರುವ ಮೊತ್ತ ಎಷ್ಟು;; ಬಾಕಿ ಇರುವ ಮೊತ್ತ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಮಧುಗಿರಿ ಪಟ್ಟಣಕ್ಕೆ ಒಳಚರಂಡಿ ಕಲ್ಪಿಸುವ ಯೋಜನೆಯ ರೂ.48.95 ಕೋಟಿಗಳ ಅಂದಾಜು ಪಟ್ಟಿಗೆ ದಿನಾಂಕ:31.05.2017ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br>ಸದರಿ ಯೋಜನೆಯ **ಪ್ಯಾಕೇಜ್-1**ರ ರೂ. 35.76 ಕೋಟಿಗಳ ಕಾಮಗಾರಿಯನ್ನು ಮೆ\|\|ರಾಮ್ಕೀ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್, ಹೈದರಾಬಾದ್ ರವರಿಗೆ ದಿನಾಂಕ:10.07.2019ರಂದು ಗುತ್ತಿಗೆ ನೀಡಲಾಗಿದ್ದು ಪ್ರಸ್ತುತ ಕಾಮಗಾರಿಗಳ ಪ್ರಗತಿಯು ಕೆಳಕಂಡಂತಿದೆ:- |

| ಕ್ರ. ಸಂ | ವಿವರ | ಗುತ್ತಿಗೆ ಕರಾರಿನಂತೆ | ಪ್ರಗತಿ |
|---|---|---|---|
| 1 | ಆಂತರಿಕ ಕೊಳವೆ ಮಾರ್ಗ ಅಳವಡಿಸುವುದು | 64.39 ಕಿ.ಮೀ. | 62.77 ಕಿ.ಮೀ. ಪೂರ್ಣಗೊಂಡಿದೆ. |
| 2 | ಯಂತ್ರ ಗುಂಡಿಗಳ ನಿರ್ಮಾಣ | 2290 | 2230 ಪೂರ್ಣಗೊಂಡಿದೆ. |
| 3 | ಗೃಹ ಸಂಪರ್ಕ ಕಲ್ಪಿಸುವುದು. | 5700 | 4684 ಪೂರ್ಣಗೊಂಡಿದೆ. |
| 4 (ಅ) | 4 ಎಂ.ಎಲ್.ಡಿ. ಮತ್ತು 0.60 ಎಂ.ಎಲ್.ಡಿ. ಸಾಮರ್ಥ್ಯದ ಎಂ.ಬಿ.ಬಿ.ಆರ್ ತಾಂತ್ರಿಕತೆಯತ್ಯಾಜ್ಯ ನೀರು ಸಂಸ್ಕರಣಾ ಘಟಕ. | 4 ಎಂ.ಎಲ್.ಡಿ. ಮತ್ತು 0.60 ಎಂ.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.<br><br>ಯಂತ್ರೋಪಕರಣಗಳನ್ನು ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಮಾರ್ಚ್ -2024 ರ ಅಂತ್ಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಿ ಚಾಲನೆಗೊಳಿಸಲಾಗುವುದು. | |

| | | |
|---|---|---|
| 4 (ಆ) | 80 ಕೆ.ಎಲ್.ಡಿ. ಎನ್.ಇ.ಬಿ.ಆರ್ ತಾಂತ್ರಿಕತೆಯ ತ್ಯಾಜ್ಯ ನೀರು ಸಂಸ್ಕರಣಾ ಘಟಕ. | ಕಾಮಗಾರಿಯನ್ನು ಕೈಗೊಳ್ಳಲು ಮಂಡಳಿಗೆ ಹಸ್ತಾಂತರಿಸಿರುವ ಜಮೀನಿನಲ್ಲಿ ತ್ಯಾಜ್ಯ ನೀರು ಶುದ್ಧೀಕರಣ ಘಟಕವನ್ನು ನಿರ್ಮಿಸಬಾರದೆಂದು ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿರುವುದರಿಂದ ಕಾಮಗಾರಿ ಯನ್ನು ಕೈಬಿಟ್ಟು, ವಲಯ-1 ರ 80 ಕೆ.ಎಲ್.ಡಿ ತ್ಯಾಜ್ಯ ನೀರನ್ನು ವಲಯ-2 ರ ತ್ಯಾಜ್ಯ ನೀರು ಶುದ್ಧೀಕರಣ ಘಟಕಕ್ಕೆ ಸಂಪರ್ಕಿಸುವ ಕಾಮಗಾರಿಯನ್ನು ಕೈಗೊಂಡಿದ್ದು ಸದರಿ ಕಾಮಗಾರಿಯನ್ನು ಮಾರ್ಚ್-2024 ರ ಅಂತ್ಯದೊಳಗೆ ಪೂರ್ಣಗೊಳಿಸಿ ಚಾಲನೆಗೊಳಿಸಲಾಗುವುದು |
| 5 | ವೆಟ್ ವೆಲ್ - 1 | ವೆಟ್‌ವೆಲ್ ನಿರ್ಮಾಣಕ್ಕೆ ಮೊದಲು ನೀಡಿದ ಸ್ಥಳಕ್ಕೆ ಸ್ಥಳೀಯ ರೈತರು ನ್ಯಾಯಾಲಯದಲ್ಲಿ ದಾವೆ ಹೂಡಿದ ಕಾರಣ ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ ರವರು ಪರ್ಯಾಯ ಸ್ಥಳವನ್ನು ದಿನಾಂಕ:07.03.2023 ರಲ್ಲಿ ಮಂಡಳಿಗೆ ಹಸ್ತಾಂತರಿಸಿರುತ್ತಾರೆ. ಅಲ್ಲದೆ ಹಸ್ತಾಂತರಿಸಿದ ಸ್ಥಳವು ಗಟ್ಟಿ ಬಂಡೆಯಿಂದ ಕೂಡಿದ ಕಾರಣ ಕಾಮಗಾರಿ ಯನ್ನು ಮುಕ್ತಾಯಗೊಳಿಸುವಲ್ಲಿ ವಿಳಂಬವಾಗಿರುತ್ತದೆ. ಪ್ರಸ್ತುತ ವೆಟ್ ವೆಲ್ ಮತ್ತು ಡಿ.ಜಿ ರೂಂ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು ಫಿನಿಷಿಂಗ್ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿಯನ್ನು ಮಾರ್ಚ್-2024 ರ ಅಂತ್ಯದೊಳಗೆ ಪೂರ್ಣಗೊಳಿಸಿ ಚಾಲನೆಗೊಳಿಸಲಾಗುವುದು. |

**ಪ್ಯಾಕೇಜ್-2**: 40 ಹೆಚ್.ಪಿ ಸಾಮರ್ಥ್ಯದ ಪಂಪಿಂಗ್ ಮೆಷನರಿ ಹಾಗೂ ಸಂಬಂಧಿಸಿದ ಉಪಕರಣಗಳನ್ನು ಸರಬರಾಜು ಮಾಡುವ ಕಾಮಗಾರಿಯನ್ನು ಮೆ|| ಎಂ.ಪೆ.ಎಲೆಕ್ಟ್ರೋ ಸರ್ವೀಸಸ್ ರವರಿಗೆ ವಹಿಸಿದ್ದು ಶೇ.60% ರಷ್ಟು ಪೂರ್ಣಗೊಂಡಿರುತ್ತದೆ.

**ಪ್ಯಾಕೇಜ್-3:** 11ಕೆವಿ ಫೀಡರ್ ಲೈನ್ ಒದಗಿಸುವ ಕಾಮಗಾರಿಯನ್ನು ಮೆ|| ಭಾಗ್ಯ ಎಲೆಕ್ಟ್ರಿಕಲ್ಸ್ ರವರಿಗೆ ವಹಿಸಿದ್ದು ಸದರಿ ಕಾಮಗಾರಿಯ ಶೇ.95ರಷ್ಟು ಪೂರ್ಣಗೊಳಿಸಲಾಗಿರುತ್ತದೆ.

<table>
<tr>
<td></td>
<td></td>
<td>

**ಪ್ಯಾಕೇಜ್-4**: Sucking cum Jetting ಮೆಷಿನರಿಯನ್ನು ಸರಬರಾಜು ಮಾಡಲು ಮೆ|| ಕ್ವಾಲಿಟಿ ಎನ್ವಿರೊ ಇಂಜಿನಿಯರ್ ಪ್ರೈ.ಲಿ. ರವರಿಗೆ ಕಾರ್ಯಾದೇಶ ನೀಡಿದ್ದು ಮೆಷಿನರಿಗಳನ್ನು ಸರಬರಾಜು ಮಾಡಿರುತ್ತಾರೆ.

ಸದರಿ ಯೋಜನೆಯಲ್ಲಿ ಒಟ್ಟಾರೆ ಶೇ.85 ಭೌತಿಕ ಪ್ರಗತಿಯಾಗಿರುತ್ತದೆ.

**ಸದರಿ ಯೋಜನೆಗೆ ಡಿಸೆಂಬರ್ 2023 ರವರೆಗೆ ಬಿಡುಗಡೆ ಮಾಡಿರುವ ಮತ್ತು ಬಳಕೆ ಮಾಡಿರುವ ಅನುದಾನದ ವಿವರಗಳು ಈ ಕೆಳಗಿನಂತಿದೆ:**

**ರೂ. ಲಕ್ಷಗಳು**

<table>
<tr><th></th><th>ರಾಜ್ಯ ಸರ್ಕಾರದ ಪಾಲು</th><th>ಆರ್ಥಿಕ ಸಂಸ್ಥೆಗಳ ಸಾಲ</th><th>ಸ್ಥಳೀಯ ಸಂಸ್ಥೆಯ ಪಾಲು</th><th>ಮೊತ್ತ</th></tr>
<tr><td rowspan="2">ಸರ್ಕಾರದ ಆದೇಶದ ಪ್ರಕಾರ</td><td>75%</td><td>20%</td><td>5%</td><td></td></tr>
<tr><td>3671.25</td><td>979</td><td>244.75</td><td>4895</td></tr>
<tr><td>ಬಿಡುಗಡೆಯಾಗಿರುವ ಮೊತ್ತ</td><td>3007.18</td><td>293.7</td><td>20</td><td>3320.88</td></tr>
<tr><td>ಬಳಕೆಯಾಗಿರುವ ಮೊತ್ತ</td><td>3007.18</td><td>293.7</td><td>20</td><td>3320.88</td></tr>
<tr><td>ಬಾಕಿ ಬಿಡುಗಡೆ ಮಾಡಬೇಕಿರುವ ಮೊತ್ತ</td><td>-</td><td>-</td><td>-</td><td>1574.12</td></tr>
</table>

</td>
</tr>
<tr>
<td>ಆ)</td>
<td>ಈ ಯು.ಜಿ.ಡಿ. ಕಾಮಗಾರಿಯು ವಿಳಂಬ ಹಾಗೂ ಅವೈಜ್ಞಾನಿಕ ಕಾಮಗಾರಿಯಿಂದಾಗಿ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>ವೆಟ್ ವೆಲ್ ನಿರ್ಮಾಣಕ್ಕೆ ಅಗತ್ಯವಾದ ಜಾಗವನ್ನು ನಿಗದಿತ ಸಮಯದೊಳಗಾಗಿ ಮಂಡಳಿಗೆ ಹಸ್ತಾಂತರಿಸದಿರುವುದರಿಂದ ಹಾಗೂ ಸ್ಥಳೀಯ ಕಾರಣಗಳಿಂದಾಗಿ ಯೋಜನೆಯು ಕುಂಠಿತಗೊಂಡಿದ್ದು ಯಾವುದೇ ಅವೈಜ್ಞಾನಿಕ ಕಾಮಗಾರಿಯು ನಡೆದಿರುವುದಿಲ್ಲ.</td>
</tr>
<tr>
<td>ಇ)</td>
<td>ಬಂದಿದ್ದಲ್ಲಿ, ಈ ಯು.ಜಿ.ಡಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ?</td>
<td>ಒಳಚರಂಡಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮವಹಿಸಿದ್ದು ಯೋಜನೆಯನ್ನು ಮಾರ್ಚ್-2024 ರ ಅಂತ್ಯದೊಳಗೆ ಚಾಲನೆಗೊಳಿಸಲು ಉದ್ದೇಶಿಸಲಾಗಿದೆ.</td>
</tr>
</table>

ಸಂಖ್ಯೆ : ನಅಇ 09 ಯುಎಂಎಸ್ 2024

19/02/2024

**(ಬಿ.ಎಸ್ ಸುರೇಶ)**

ನಗರಾಭಿವೃದ್ಧಿ ಮತ್ತು

ನಗರ ಯೋಜನೆ ಸಚಿವರು